
# ತೃಷೆ

■ ಸಂತೋಷ್ ಅನಂತಪುರ
ಕಲೆ: ಈಶ್ವರ ಬಡಿಗೇರ



ಹಸಿವಾಗ್ನಿಯನ್ನು ತಣಿಸಲು ಆಹಾರವನ್ನು ಅರಸಿಕೊಂಡು ನೆಲೆಯನ್ನು ಹುಡುಕುತ್ತಾ, ಸುಸ್ತಾಗಿ ಬಾಯಾರಲು ಗುಡ್ಡದ ಬುಡದಲ್ಲಿನ ಶಂಕರಿ ದೇವಿಯ ಗುಡಿ ಕಾಣಿಸಿತು. ಕಡು ಬೇಸಗೆಯು ದಾಹವನ್ನು ಸಿಕ್ಕಾಪಟ್ಟೆ ಏರಿಸಿತ್ತು. ಒಂದೆರಡು ಕೊಡ ನೀರನ್ನು ಅರ್ಚಕರು ಗುಡಿಗೆ ಎತ್ತಿಕೊಂಡು ಹೋಗುವುದನ್ನು ಗುಡ್ಡದಿಂದ ಕೆಳಕ್ಕಿಳಿಯುವಾಗ ನೋಡಿಯೂ ಇದ್ದಳು. ದಾಹವನ್ನು ತಣಿಸಲು ಬೇಕಾದಷ್ಟು ನೀರು ಗುಡಿಯ ಬಳಿಯ ಕುಂಡದಲ್ಲಿ ಸಿಗಬಹುದೆಂಬ ನಿರೀಕ್ಷೆಯಲ್ಲಿ ದಾಪುಗಾಲು ಹಾಕಿದಳು.

ಏದುಸಿರು ಬಿಡುತ್ತಾ ಓಡಿ ಬಂದವಳಿಗೆ ಕೊಂಡಕ್ಕಿಳಿಯಲು ಆಗಲಿಲ್ಲ. ನೀರನ್ನು ಕಂಡದ್ದೇ, ಬಾಯಾರಿಕೆ ಇನ್ನಷ್ಟು ಹೆಚ್ಚಾಗಿ ನಾಲಗೆಯ ಪಸೆ ಆರಿ, ಗಂಟಲು ಕಟ್ಟಿಕೊಂಡಿತು. ನೀರಿಗಾಗಿ ಚಡಪಡಿಸುತ್ತಾ ಸುತ್ತಮುತ್ತ ಕಣ್ಣು ಹಾಯಿಸಿದವಳ ಕಣ್ಣಿಗೆ ಶಂಕರಿಯ ಗುಡಿಯು ಕಂಡಿತು.

ಗುಡಿ ಬೋಳು ಬೋಳಾಗಿ, ಒಣಗಿ ಹೋದಂತೆ ಕಾಣುತ್ತಿತ್ತು. 'ಯಬ್ಬೋ! ಎಂಥಾ ಬಿಸಿಲಮ್ಮ ಇದು. ಬೆಳಬೆಳಿಗ್ಗೆಯೇ ಮಟಮಟ ಮಧ್ಯಾಹ್ನದ ಹಾಗೆ ಉಂಟಲ್ಲ. ಎಂತ ಕಷ್ಟದ ಬಿಸಿಲಪ್ಪಾ! ನೀರು ಕುಡಿದೇ ಹೊಟ್ಟೆ ತುಂಬುತ್ತದೆ, ಈ ಉರಿಗೆ. ಕಲಿಗಾಲವಲ್ಲವಾ, ಉಳಿಗಾಲ ಉಂಟಾ? ಧರ್ಮ, ನೇಮ, ಕರ್ಮ ಅಂತ ಚೂರಾದರೂ ಬೇಕಲ್ಲ ಜನರಿಗೆ, ಉಹುಂ..! ಯಾರಿಗೆ ಬೇಕು ಅಮ್ಮ, ನೀವು ಮತ್ತು ನಾನು?' ಪ್ರಶ್ನೆಗಳನ್ನು ಎಸೆಯುತ್ತಾ, ಶಂಕರಿಯೊಂದಿಗೆ ಗರ್ಭಗುಡಿಯಲ್ಲಿ ಅರ್ಚಕರು ಸಂಭಾಷಣೆಯಲ್ಲಿದ್ದರು.

'ಎಂತ ಅಮ್ಮ ನೀವು? ಎಲ್ಲವನ್ನೂ ನೋಡಿಯೂ ಬಾಯಿಮುಚ್ಚಿ ಕೂತರೆ ಎಂತದೂ ನಡಿಲಿಕ್ಕಿಲ್ಲಮ್ಮ, ಮಾತನಾಡಬೇಕು ನೀವು' ಹೇಳಿ, ದೇವಿಯ ತಲೆಗೆ ಕೊಡಪಾನದಿಂದ ನೀರನ್ನು ಬಳಬಳನೆ ಹೊಯ್ಯುತ್ತಾ, ಅರ್ಚಕರು ಹೇಳಿದರು.

ಮಡಿ ವಸ್ತ್ರದಿಂದ ಶಂಕರಿಯನ್ನು ಒರೆಸಿ, ಹಸಿರು ಸೀರೆ ಉಡಿಸಿ, ಅಲಂಕಾರಕ್ಕೆ ಮುಂದಾದರು. ಕಪ್ಪುಕಲ್ಲಿನಿಂದ ಆವಿರ್ಭವಿಸಿ ಕುಳಿತ ಶಂಕರಿಯ ಮೂಗಿಗೆ ಬೆಳ್ಳಿಯ ನತ್ತನ್ನು ಸಿಕ್ಕಿಸಿ, ಕತ್ತಿಗೆ ಕೆಂಪು ದಾಸವಾಳದ ಮಾಲೆಯನ್ನು ಹಾಕಿ, ತಲೆಯ ಮೇಲೊಂದು ಬಿಳಿ ದಾಸವಾಳವನ್ನಿರಿಸಿ, ಹಣೆಗೆ ಕಾಸಗಲದ ಗಂಧದ ಬೊಟ್ಟನ್ನಿಟ್ಟರು. ಅರ್ಚಕರು, 'ನಮಸ್ತೇತು ಮಹಾಮಾಯೆ ಶ್ರೀ ಪೀಠೇ ಸುರಪೂಜಿತೆ, ಶಂಖ ಚಕ್ರ ಗಧಾ ಹಸ್ತೇ ಮಹಾಲಕ್ಷ್ಮಿ ನಮೋಸ್ತುತೇ' ಸ್ತುತಿಸಿ, ದೇವಿಗೆ ಉದ್ದಂಡ ಬಿದ್ದರು.

ಗರ್ಭಗುಡಿಯೊಳಗಿನಿಂದ ಏರಿಳಿಯುವ ಧ್ವನಿಯಲ್ಲಿ ಅರ್ಚಕರ ಮಂತ್ರ ಮೊಳಗುತ್ತಿತ್ತು. ದೇವಳದ ಆವರಣದಲ್ಲಿ ಬೇರಾರೂ ಇರಲಿಲ್ಲ. ಬೇಸಗೆಯ ಬಿರುಬಿಸಿಲು ದೇಹವನ್ನು ಒದ್ದೆಯಾಗಿಸಿದಷ್ಟೇ ವೇಗವಾಗಿ ಗಂಟಲನ್ನೂ ಒಣಗಿಸಿ ಬಿಡುತ್ತಿತ್ತು. ಹಾಗೊಮ್ಮೆ ಬಂದು ಹೋಗುವ ಒಣ ಬಿಸಿಗಾಳಿಯು ಗುಡಿಯೊಳಗೂ ಹೊಕ್ಕು, ಶಂಕರಿಗೆ ಚಾಮರ ಸೇವೆಯನ್ನು ಸಲ್ಲಿಸುವಾಗ, ದೇವಿಯ ಘೋಷಕ್ಕೆಂದು ತೂಗು ಹಾಕಿದ್ದ ಎರಡು ಗಂಟೆಗಳು ಅತ್ತಿತ್ತ ಓಲಾಡಿದವು.

ಠಣ..ಠಣ ಎಂದು ತೆಳ್ಳಗಿನ ಗಂಟಾಮಣಿಯು ಹೊಡೆದುಕೊಂಡು, ಅಲೆ ಅಲೆಯಾಗಿ ನಾದವು ಹೊಮ್ಮಿ ತೇಲಿ ಹೋಯಿತು.

'ಹೇಗೂ ಶಂಕರಿಯ ಗುಡಿಗೆ ಬಂದಿದ್ದೇನೆ, ಪ್ರದಕ್ಷಿಣೆಯನ್ನು ಹಾಕೋಣ' ಅಂದುಕೊಂಡು ಹೆಜ್ಜೆ ಹಾಕಿದಳು. ಶಂಕರಿಯನ್ನು ಮೀಯಿಸಿದ ನೀರು ಹೊರಕ್ಕೆ ಹರಿದು, ಅಲ್ಲೇ ಇದ್ದ ಪುಟ್ಟ ಹೊಂಡಕ್ಕೆ ಬಿದ್ದು ಮುಂದಕ್ಕೆ ಸಾಗುತ್ತಿತ್ತು. ಗರ್ಭಗುಡಿಯಿಂದ ಸಣ್ಣಗೆ ತೊಟ್ಟಿಕ್ಕುವ ನೀರಿಗೆ ಮುಖವೊಡ್ಡಿ, ಒಣಗಿದ ಗಂಟಲಿಗೆ ಪಸೆಯುಣಿಸಿಕೊಂಡದ್ದೇ, ಅವಳಿಗೆ ಸ್ವಲ್ಪ ಸಮಾಧಾನವಾಯಿತು. ಹೊಂಡದೊಳಕ್ಕೆ ಬಾಯಿ ಹಾಕಿ ಇನ್ನಷ್ಟು ನೀರನ್ನು ಕುಡಿದು ತಲೆ ಎತ್ತಿ ಸುತ್ತಲೂ ಒಮ್ಮೆ ಕಣ್ಣನ್ನು ಹಾಯಿಸಿದಳು.

ಗರ್ಭಗುಡಿಯ ಎದುರು ವಕ್ರವಾಗಿ ಹರಡಿರುವ ನೆರಳಿನತ್ತ ಹೆಜ್ಜೆ ಹಾಕಿದಳು.

***